ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2022

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844

ಸಂಪುಟ-23 ಸಂಚಿಕೆ-12 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

# ಶ್ರೀ ಶಾರದಾ ಕ್ರಿಕೆಟ್ ಟ್ರೋಫಿ : ಮತ್ತೆ ನಂದಳಿಕೆ ತಂಡಕ್ಕೆ





ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು ಇದರ ಯುವ ವೇದಿಕೆಯ ಆಶ್ರಯದಲ್ಲಿ ಸತತ 32 ವರ್ಷಗಳಿಂದ ಸಮಾಜ ಬಾಂಧವರಿಗಾಗಿ ನಡೆಸಿಕೊಂಡು ಬರುತ್ತಿರುವ ಶ್ರೀ ಶಾರದಾ ಟ್ರೋಫಿ ಸೌಹಾರ್ದ ಕ್ರಿಕೆಟ್ ಪಂದ್ಯಾಟವು ತಾ.04.12.2022ರಂದು ಎಂ.ಜಿ.ಎಂ. ಕಾಲೇಜು ಕ್ರೀಡಾಂಗಣದಲ್ಲಿ ಜರಗಿತು.

ಈ ಬಾರಿ ಒಟ್ಟು 20 ತಂಡಗಳು ಭಾಗವಹಿಸಿದ್ದು ಮೊದಲೇ ಆನ್‌ಲೈನ್ ಮೂಲಕ ಹೆಸರು ನೋಂದಾಯಿಸಿದ್ದರಿಂದ ನಿಗದಿತ ಸಮಯಕ್ಕೆ ಸರಿಯಾಗಿ ಬೆಳಿಗ್ಗೆ 8.00ಕ್ಕೆ ಪಂದ್ಯಾಟವನ್ನು ಪ್ರಾರಂಭಿಸಲಾಯಿತು.


**ಉದ್ಘಾಟನಾ ಸಮಾರಂಭ:** ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕುಡಾಲ್ ವೆಂಕಟರಮಣ ರಾವ್ ಮೂಡಬೆಟ್ಟು ಭಾಗವಹಿಸಿ ಎಲ್ಲಾ ತಂಡಗಳಿಗೂ ಶುಭವನ್ನು ಹಾರೈಸಿದರು. ಅವರೊಂದಿಗೆ ವೇದಿಕೆಯಲ್ಲಿ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಪ್ರಭಾಕರ ಭಂಡಿ, ಕೋಶಾಧಿಕಾರಿ ಗಣೇಶ ಹೆಬ್ಬಾರ್, ಉಮೇಶ ರಾವ್ ಮೂಡಬೆಟ್ಟು ಉಪಸ್ಥಿತರಿದ್ದರು. ಕೃಷ್ಣ ಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರ್ವಹಿಸಿದರು. ಎಲ್ಲಾ ಕ್ರೀಡಾಳುಗಳನ್ನು ಪರಿಚಯಿಸಿಕೊಂಡರು. ಟಿ. ವಿಶ್ವನಾಥ ಶ್ಯಾನುಭಾಗ್ ತಂಡಗಳ ಹೆಸರು ಕರೆದು ಆರಂಭಿಕ ವ್ಯವಸ್ಥೆಯನ್ನು ನಡೆಸಿಕೊಟ್ಟರು.

**ಸಮಾರೋಪ ಸಮಾರಂಭ :** ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿರುವ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾದ ಬೆಳವಾಯಿ ದೇವಾನಂದ ಭಟ್‌ರವರು ಮಾತನಾಡುತ್ತಾ "ಶ್ರೀ ಶಾರದಾ ಮಂಟಪದಲ್ಲಿ ಯುವ ವಿಭಾಗವು ಪ್ರಾರಂಭಗೊಂಡ ಆಗಿನ ಕಾಲದಲ್ಲಿ ಯುವಕರನ್ನು ಒಂದೆಡೆ ಸೇರಿಸಲು ಸೌಹಾರ್ದ ಕೂಟವಾದ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವನ್ನು ಪ್ರಾರಂಭಿಸಿದ್ದು ಅದನ್ನು ನಿರಂತರವಾಗಿ 32 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯವಾಗಿರುತ್ತದೆ. ಪ್ರಾರಂಭದಲ್ಲಿ ರೋಲಿಂಗ್ ಟ್ರೋಫಿಯೊಂದಿಗೆ ಕಡಿಮೆ ಮೊತ್ತವನ್ನು ನೀಡುತ್ತಿದ್ದರೂ ಯುವಕರು ಹಲವಾರು ಊರುಗಳಿಂದಲೂ ಉಡುಪಿಗೆ ಆಗಮಿಸಿ ಕ್ರಿಕೆಟ್ ಪಂದ್ಯದಲ್ಲಿ ಭಾಗವಹಿಸುತ್ತಿದ್ದುದು ಶ್ಲಾಘನೀಯವಾಗಿದೆ" ಎಂದು ಅಭಿನಂದಿಸಿದರು.

ಹಾಗೆಯೇ ವಿಜೇತ ತಂಡದವರಿಗೆ ಬಹುಮಾನ ವಿತರಿಸಿದರು. ಪ್ರಾಯೋಜಕರಾದ ಸಿ.ಎಸ್. ರಾವ್ ದಂಪತಿಗಳು, ವೀಣಾ ಜಯರಾಂ, ಸತೀಶ್ ರಾವ್

(5ನೇ ಪುಟಕ್ಕೆ...)

## ಮಹಿಳಾವೇದಿಕೆಯಿಂದ ಒಳಾಂಗಣ ಕ್ರೀಡೆಗಳು



ಅತ್ತ ಎಂ.ಜಿ.ಎಂ. ಕ್ರೀಡಾಂಗಣದಲ್ಲಿ ಪುರುಷರಿಗೆ ಕ್ರಿಕೆಟ್ ಪಂದ್ಯಾಟಗಳು ನಡೆಯುತ್ತಿರುವಾಗ, ಇತ್ತ ಮಹಿಳೆಯರು ಮತ್ತು ಮಕ್ಕಳಿಗೆ ಒಳಾಂಗಣ ಕ್ರೀಡೆಗಳನ್ನು ಏರ್ಪಡಿಸಲಾಗಿತ್ತು. ಬೆಳಿಗ್ಗೆ 10.00 ಗಂಟೆಗೆ ದೀಪ ಪ್ರಜ್ವಲನ ನೆರವೇರಿಸಿದ ಸಮಾಜದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರರು, ಇಂತಹ ಕ್ರೀಡಾಕೂಟಗಳಿಂದ ಸಮಾಜ ಬಾಂಧವರಲ್ಲಿ ಸಂಬಂಧ ಬೆಸೆಯುತ್ತದೆ. ಹಾಗೂ ಅದರಿಂದ ನಮ್ಮ ಸಮಾಜಕ್ಕೆ ಬಲ ಬರುತ್ತದೆ. ಜೊತೆಗೆ ಎಲ್ಲರಿಗೆ ಮನರಂಜನೆಯೂ ದೊರೆಯುತ್ತದೆ ಎಂದು ಹೇಳಿದರು. 3 ವರ್ಷದ ಎಳೆಯ ಮಕ್ಕಳಿಂದ 30 ವರ್ಷ ಮೇಲ್ಪಟ್ಟ ಮಹಿಳೆಯರಿಗೂ ಕೂಡ ಕ್ರೀಡೆಗಳನ್ನು ಆಯೋಜಿಸಲಾಗಿತ್ತು.

(3ನೇ ಪುಟಕ್ಕೆ...)

### ಒಳಾಂಗಣ ಕ್ರೀಡಾಕೂಟದ ವಿಜೇತರು

- **ಟೆಡ್ಡಿಬೇರನ್ನು ಪಾಸ್ ಮಾಡುವುದು (4 ವರ್ಷದಿಂದ 5 ವರ್ಷ ಮಕ್ಕಳಿಗೆ)**
  1. ಸಮ್ಯಕ್ ಶಾನುಭಾಗ್, 2. ಯುವಾಂಶ್ ಕೆ. ರಾವ್ 3. ಸಾನ್ವಿ ಉಡುಪಿ
- **ಲಿಂಬೆ ಮತ್ತು ಚಮಚ ರೇಸ್ (6 ವರ್ಷದಿಂದ 8 ವರ್ಷದ ಮಕ್ಕಳಿಗೆ)**
  1. ಶ್ರದ್ಧಾ ರಾವ್ ಆರ್ 2. ಸನ್ನಿಧಿ 3. ಶ್ರೀದೇವಿ ರಾವ್
- **ಟೊಂಕ ಓಟ/ಕುಂಟಿ ಓಡುವುದು (5ನೇ ಕ್ಲಾಸ್‌ನಿಂದ 7ನೇ ಕ್ಲಾಸ್‌ನ ಮಕ್ಕಳಿಗೆ)**
  1. ಸಾನ್ವಿ ಕೆ.ಹೆಚ್ 2.ಅದ್ವಿತಿ ರಾವ್ 3. ಗೌರೀಶ್ ಜೆ.ರಾವ್ & ಸಾನ್ವಿ ಆರ್.ರಾವ್
- **ಚಾಕಲೇಟ್ ಹೆಕ್ಕುವ ರೇಸ್ (3 ವರ್ಷಕ್ಕಿಂತ ಕಡಿಮೆ ವರ್ಷದ ಮಕ್ಕಳಿಗೆ)**
  1. ಮೇಧಾ ಆರ್.ರಾವ್ 2. ಅಗಸ್ತ್ಯ ರಾವ್ 3. ಮನಸ್ವಿ ರಾವ್ & ಅಶ್ವಿತಿ ರಾವ್
- **2 ರಟ್ಟುಗಳ ಓಟ/ರೇಸ್ (8ನೇ ಕ್ಲಾಸ್‌ನಿಂದ 10 ನೇ ಕ್ಲಾಸ್‌ನವರೆಗಿನ ಮಕ್ಕಳಿಗೆ)**
  1. ವೈಷ್ಣವಿ 2. ಸಹನ
- **ಕಣ್ಣುಕಟ್ಟಿ ಸೀರೆ ಉಡಿಸುವುದು (60 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಹಿಳೆಯರಿಗೆ)**
  1. ರಶ್ಮಿ, ಮಂದಾರ್ತಿ 2. ಸೌಮ್ಯಶ್ರೀ, ಉದ್ಯಾವರ 3. ಪದ್ಮಶ್ರೀ, ಪಡುಬಿದ್ರಿ
- **ಕಣ್ಣು ಕಟ್ಟಿ ಕಾಳು ಬೇರ್ಪಡಿಸುವ ಆಟ–ರಾಜ್‌ಮಾ ಕಾಳು–ಅಲಸಂಡೆ ಕಾಳು (60 ವರ್ಷ ಮೇಲ್ಪಟ್ಟವರಿಗೆ ನಡೆದ ಸ್ಪರ್ಧೆ)**
  1. ಪ್ರಸನ್ನ ವಿ. ರಾವ್ 2. ಜ್ಯೋತಿ ರಾವ್ 3. ರೇವತಿ ರಾವ್
- **ಬಾಂಬಿಂಗ್ ದ ಸಿಟಿ (ಎಲ್ಲಾ ಮಹಿಳೆಯರಿಗೆ)**
  1. ಜಯಲಕ್ಷ್ಮೀ ಎಂ. ರಾವ್ 2. ವೀಣಾ ಜೆ. ರಾವ್

### ಶ್ರೀ ಶಾರದಾ ಟ್ರೋಫಿ ಬಹುಮಾನಿತರು

ವಿನ್ನರ್ಸ್ : ನಂದಳಿಕೆ ತಂಡ
ರನ್ನರ್ಸ್ : ರಾವ್ ಬ್ರದರ್ಸ್ ಕಟಪಾಡಿ ಎ ತಂಡ
ಸೆಮಿಫೈನಲ್ ಲೂಸರ್ಸ್ :
ಎಫ್.ಡಬ್ಲ್ಯೂ.ಎಫ್., ಬೆಂಗಳೂರು ಮತ್ತು ಸ್ಥಾನಿಕ ವಾರಿಯರ್ಸ್, ಬೆಳ್ತಂಗಡಿ
ಉತ್ತಮ ದಾಂಡಿಗ : ಕಾರ್ತಿಕ್ ರಾವ್, ನಂದಳಿಕೆ ತಂಡ ;
ಉತ್ತಮ ಎಸೆತಗಾರ : ಕಾರ್ತಿಕ್ ಕುಮಾರ್, ರಾವ್ ಬ್ರದರ್ಸ್ ಕಟಪಾಡಿ ಎ ತಂಡ ;
ಸರಣಿಶ್ರೇಷ್ಠ : ಸತ್ಯ, ರಾವ್ ಬ್ರದರ್ಸ್ ಕಟಪಾಡಿ ಎ ತಂಡ

### ತ್ರೋಬಾಲ್ ಬಹುಮಾನಿತರು

ವಿನ್ನರ್ಸ್ : ಉಡುಪಿ ಎ ಟ್ರೋಫಿ ಹಾಗೂ ಚಿನ್ನದ ಪದಕ
ರನ್ನರ್ಸ್ : ಮಂದಾರ್ತಿ ತಂಡ ಟ್ರೋಫಿ ಹಾಗೂ ಬೆಳ್ಳಿ ಪದಕ
ಬೆಸ್ಟ್ ಸರ್ವರ್ : ಪ್ರವೀಣ ಮಂದಾರ್ತಿ ಬೆಸ್ಟ್ ಆಲ್‌ರೌಂಡರ್ : ಸೌಮ್ಯ, ಮಂದಾರ್ತಿ ತಂಡ

### ಶ್ರೀ ಶಾರದಾ ಟ್ರೋಫಿ ಪಂದ್ಯಾಟ ಪ್ರಾಯೋಜಕರು

-ಪ್ರಥಮ ಬಹುಮಾನ : ರೂ.12,000/- ಶ್ರೀ ಆಲೆವೂರು ಶ್ಯಾಮರಾಯರು ತಮ್ಮ ಮಾತಾಪಿತರಾದ ದಿ| ಶಾಂತಾ ಹಾಗೂ ದಿ| ಭುಜಂಗರಾಯರ ಸ್ಮರಣಾರ್ಥ
-ದ್ವಿತೀಯ ಬಹುಮಾನ : ರೂ.8,000/- ಶ್ರೀಮತಿ ಸುನಂದ ಹಾಗೂ ಶ್ರೀ ಸಿ.ಎಸ್.ರಾವ್, ಚಿಟ್ಪಾಡಿ
-ಸಮಾಧಾನಕರ ಬಹುಮಾನ : ಒಟ್ಟು ರೂ.6,000/- ಶ್ರೀ ವೈ. ಭುವನೇಂದ್ರ ರಾಯರು ತಮ್ಮ ಮಾತಾಪಿತರಾದ ದಿ| ಗಿರಿಜಮ್ಮ ಹಾಗೂ ದಿ| ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರ ಸ್ಮರಣಾರ್ಥ
-ಉತ್ತಮ ಬೌಲರ್, ಬ್ಯಾಟ್ಸ್‌ಮನ್ ಮತ್ತು ಆಲ್‌ರೌಂಡರ್ ಪುರಸ್ಕಾರ : ಒಟ್ಟು ರೂ.6,000/-, ಶ್ರೀ ಬಿ. ಜಯರಾಮ ರಾವ್

### ಮಹಿಳೆಯರ ತ್ರೋಬಾಲ್ ಪಂದ್ಯಾಟ ಪ್ರಾಯೋಜಕರು

-ಪ್ರಥಮ ಬಹುಮಾನ : ರೂ.5,000/-
-ದ್ವಿತೀಯ ಬಹುಮಾನ : ರೂ.3,000/-
} ಶ್ರೀಮತಿ ಸುಕನ್ಯಾ ಮತ್ತು ಶ್ರೀ ಸತೀಶ್ ರಾವ್, ಚಿಟ್ಪಾಡಿ

ಟ್ರೋಫಿ ಫಲಕಗಳ ಪ್ರಾಯೋಜಕರು : ರೂ.5,000/- ಟಿ. ಬಲೀಂದ್ರ ಶ್ಯಾನುಭಾಗ್ ತಂತ್ರಾಡಿ ಸ್ಮರಣಾರ್ಥ ಅವರ ಮಕ್ಕಳಿಂದ

ತಂಪು ಪಾನೀಯದ ಪ್ರಾಯೋಜಕರು : ಕೀರ್ತಿಶೇಷರಾದ ಶ್ರೀಮತಿ ಸರಸ್ವತಿ ಮತ್ತು ಶ್ರೀ ವೆಂಕಟ್ ರಾವ್ ಶಾನುಭಾಗ್ ಕೊಕ್ಕರ್ಣೆ, ಇವರ ಸ್ಮರಣಾರ್ಥ ಅವರ ಮಕ್ಕಳು ಮತ್ತು ಮೊಮ್ಮಕ್ಕಳಿಂದ.

ಬೆಳಗ್ಗಿನ ಹಾಗೂ ಸಾಯಂಕಾಲದ ಉಪಹಾರ ಪ್ರಾಯೋಜಕರು :
ಕೆ. ಮಂಜುನಾಥ್ ಹೆಬ್ಬಾರ್, ಕೆ. ಗಣೇಶ ಹೆಬ್ಬಾರ್, ಪಿ. ಪ್ರಭಾಕರ ಭಂಡಿ, ಅಜಿತ್ ರಾವ್ ಬೈಲೂರು

ಮಹಿಳಾ ವೇದಿಕೆ ದೇಣಿಗೆ : ಜ್ಞಾನೇಶ್ವರಿ ರಾಮಚಂದ್ರ ಕೊಟ್ಟಾರಿ

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

# ಶ್ರೀ ಕೃಷ್ಣಯ್ಯ ಅನಂತಪುರ ಬರೆದಿರುವ ಕವನ ಸಂಕಲನ ಮತ್ತು ಹನಿಗವನ ಬಿಡುಗಡೆ



ನವಕರ್ನಾಟಕ ಪ್ರಕಾಶನ ಬೆಂಗಳೂರು ಪ್ರಕಟಿಸಿರುವ ಕಾಸರಗೋಡಿನ ಹಿರಿಯ ಸಾಹಿತಿ, ಕವಿ, ಧಾರ್ಮಿಕ ಮುಂದಾಳು ಶ್ರೀ ಕೃಷ್ಣಯ್ಯ ಅನಂತಪುರ ಅವರ "ಬೇರುಗಳು ಅಮ್ಮನ ಹಾಗೆ" ಎಂಬ ಕವನ ಸಂಕಲನ ಮತ್ತು 'ಎದೆ ಬಿಗಿದ ಕ್ಷಣಗಳು' ಎಂಬ ಹನಿಗವನ ಸಂಕಲನ ಬಿಡುಗಡೆ ಸಮಾರಂಭವು ಇತ್ತೀಚೆಗೆ ಅನಂತಪುರದ 'ಅನಂತಶ್ರೀ' ಸಭಾಂಗಣದಲ್ಲಿ ನೆರವೇರಿತು.

ಸಂಕಲನಗಳನ್ನು ಬಿಡುಗಡೆ ಮಾಡಿದ ಹಿರಿಯ ಖ್ಯಾತ ಕವಿ ಶ್ರೀ ಸುಬ್ರಾಯ ಚೊಕ್ಕಾಡಿಯವರು 'ಬೇರುಗಳು ಅಮ್ಮನ ಹಾಗೆ' ಕವನ ಸಂಕಲನದ ಕುರಿತು ಮಾತನಾಡಿ ವರ್ಷಕ್ಕೆ ಹತ್ತು ಹಲವು ಪುಸ್ತಕಗಳನ್ನು ಪ್ರಕಟಿಸುವವರು ಇದ್ದಾರೆ. ಆದರೆ ಶ್ರೀ ಕೃಷ್ಣಯ್ಯ ಅನಂತಪುರ ಪ್ರಚಾರದ ಗೀಳಿಗೆ ಬಲಿಯಾಗದೆ ಬರೆಯುತ್ತಾ ಬಂದವರು. ತಮ್ಮ ಉತ್ತಮ ಕವಿತೆಗಳ ಮೂಲಕ ಕಾವ್ಯ ಪ್ರೇಮಿಗಳ ಮನಸ್ಸನ್ನು ಗೆದ್ದವರು ಎಂದರು "ಎದೆ ಬಿಗಿದ ಕ್ಷಣಗಳು ಹನಿಗವನ ಸಂಕಲನದ ಬಗ್ಗೆ ಮಾತನಾಡಿದ ಸಾಹಿತಿ ಡಾ. ಬಾಲಕೃಷ್ಣ ಹೊಸಂಗಡಿಯವರು ಹನಿಗವನಗಳು ಹೇಗಿರಬೇಕು ಎನ್ನುವುದನ್ನು ಶ್ರೀ ಕೃಷ್ಣಯ್ಯ ಅನಂತಪುರ ತಮ್ಮ ಈ ಹನಿಗವನ ಸಂಕಲನದಲ್ಲಿ ತೋರಿಸಿಕೊಟ್ಟಿದ್ದಾರೆ ಎಂದರು. ಅಧ್ಯಕ್ಷ ಸ್ಥಾನ ವಹಿಸಿದ್ದ ಹಿರಿಯ ಸಾಹಿತಿ, ಯಕ್ಷಗಾನ ಅರ್ಥದಾರಿ ಡಾ. ರಮಾನಂದ ಬನಾರಿಯವರು ಶ್ರೀ ಕೃಷ್ಣಯ್ಯ ಅನಂತಪುರ ತಮ್ಮ ಉತ್ತಮ ಕವಿತೆಗಳ ಮೂಲಕ ಕಾಸರಗೋಡಿನ ಹೆಮ್ಮೆಯ ಕವಿ ಎನಿಸಿಕೊಂಡಿದ್ದಾರೆ ಅಂದರು. ಉದಯವಾಣಿಯ ಹಿರಿಯ ಪತ್ರಕರ್ತ ಶ್ರೀ ಪ್ರದೀಪ್ ಬೇಕಲ್ ಶುಭಾಸಂಪನೆ ಗೈದರು. ಇದೇ ಸಂದರ್ಭದಲ್ಲಿ ಕೇರಳ ರಾಜ್ಯದ ಅತ್ಯುತ್ತಮ ಕೃಷಿಕ ಪ್ರಶಸ್ತಿ ಪಡೆದ ಶಿವಾನಂದ ಬಳಕ್ಕಿಲ, ರಾಷ್ಟ್ರೀಯ ಖ್ಯಾತಿಯ ಹಿರಿಯ ಚಿತ್ರ ಕಲಾವಿದ ಪಿ.ಎಸ್. ಪುಣಿಚಿತ್ತಾಯ ಹಾಗೂ ದೈವಗಳ ಚಾಕರಿಯಲ್ಲಿ ಸಾಧನೆ ಮಾಡಿದ ಚಂದ್ರ ಶೇಖರ ಅನಂತಪುರ ಅವರನ್ನು ಶ್ರೀ ಕೃಷ್ಣಯ್ಯ ಅನಂತಪುರ ಸನ್ಮಾನಿಸಿದರು. ಪ್ರಕೃತಿ ಯುವ ತಂಡ ಅನಂತಪುರ, ಪುತ್ತೂರು ಸಾಹಿತ್ಯ ಸಂಘ ಮತ್ತು ಕಾಸರಗೋಡು ಕನ್ನಡ ಲೇಖಕರ ಸಂಘದ ವತಿಯಿಂದ ಶ್ರೀ ಕೃಷ್ಣಯ್ಯ ಅನಂತಪುರ ಅವರನ್ನು ಸನ್ಮಾನಿಸಲಾಯಿತು. ಶ್ರೀ ಸಂತೋಷ್ ಅನಂತಪುರ ಸ್ವಾಗತಿಸಿ ಶ್ರೀ ವಿಶಾಲಾಕ್ಷ ಪುತ್ರಕಳ ಕಾರ್ಯಕ್ರಮ ನಿರ್ವಹಿಸಿದರು. ವಿಜಯ ಕುಮಾರ್ ಅನಂತಪುರ ಧನ್ಯವಾದ ಸಮರ್ಪಿಸಿದರು.

## ಸಂಘದ ಆಶ್ರಯದಾತ ಸದಸ್ಯರಾಗಿ ಸಿ. ಎಸ್. ರಾವ್



ನಮ್ಮ ಸಂಘದ ಗೌರವ ಸಲಹೆಗಾರರಾದ, ಮಾಜಿ ಅಧ್ಯಕ್ಷರು ಆಗಿರುವ ಶ್ರೀಯುತ ಸಿ. ಎಸ್ ರಾವ್ ಅವರು ಸಂಘದ ಆಶ್ರಯದಾತ ಸದಸ್ಯರಾಗುವ ಮೂಲಕ ತಮ್ಮ ಸದಸ್ಯತ್ವವನ್ನು ಉನ್ನತೀಕರಿಸಿರುತ್ತಾರೆ. (ರೂ.5000) ಶ್ರೀಯುತರಿಗೆ ಸಂಘದ ಪರವಾಗಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇವರು ವಿಶೇಷ ಅಭಿನಂದನೆ ಸಲ್ಲಿಸಿರುತ್ತಾರೆ.

## ರಾಜ್ಯ ಮಟ್ಟದ ಸ್ಪರ್ಧೆಗೆ ಶ್ರೀ ವೈ. ಕುಮಾರಸ್ವಾಮಿ ಆಯ್ಕೆ



ದಿನಾಂಕ 30–11–2022 ರಂದು ನಡೆದ ಜಿಲ್ಲಾಮಟ್ಟದ ಹಿರಿಯರ ಕ್ರೀಡಾ ಕೂಟದಲ್ಲಿ ಶ್ರೀ ವೈ. ಕುಮಾರಸ್ವಾಮಿಯವರು ಡಿಸ್ಕಸ್, ಶಾಟ್‌ಪುಟ್, 400 ಮೀಟರ್ ಓಟ ದಲ್ಲಿ ಚಿನ್ನದ ಪದಕ ಪಡೆದು ಜನವರಿ ತಿಂಗಳಲ್ಲಿ ಕೋಲಾರದಲ್ಲಿ ನಡೆಯುವ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ. ಮಾಜಿ ವಿಧಾನಪರಿಷತ್ ಸದಸ್ಯ ಐವನ್ ಡಿಸೋಜರವರು ಪದಕವನ್ನು ಎರ್ಮಾಳು ಕುಮಾರಸ್ವಾಮಿಯವರಿಗೆ ನೀಡುತ್ತಿರುವುದು.

## ಭಾವನಾ ಪ್ರತಿಷ್ಠಾನ ಹಾವಂಜೆಗೆ ಪ್ರಶಸ್ತಿ



ನಮ್ಮ ರಾಜ್ಯದಲ್ಲಿ ಮಾತ್ರವಲ್ಲದೇ ದೇಶದ ನಾನಾ ಕಡೆಗಳಲ್ಲೂ ಕೂಡ ಕಲಾತ್ಮಕ ಕಾರ್ಯಕ್ರಮಗಳನ್ನು ಸಂಘಟಿಸುತ್ತ ನಮ್ಮ ಕಲೆ, ಸಂಸ್ಕೃತಿಯ ಉಳಿವು ಹಾಗೂ ಬೆಳವಣಿಗೆಯಲ್ಲಿ ಶ್ರಮಿಸುತ್ತಿರುವ ಉಡುಪಿಯ ಭಾವನಾ ಪ್ರತಿಷ್ಠಾನ (ರಿ.) ಹಾವಂಜೆ ಸಂಸ್ಥೆಗೆ ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಡುಪಿಯ ತಾಲೂಕು ಸಮ್ಮೇಳನ 'ಉತ್ಥಾನ' ದಲ್ಲಿ ಪ್ರಶಸ್ತಿಯೊಂದಿಗೆ ಸನ್ಮಾನಿಸಲಾಯಿತು. ಭಾವನಾ ಸಂಸ್ಥೆಯನ್ನು ಹಾವಂಜೆಯಲ್ಲಿ ಕಟ್ಟಿ ಬೆಳೆಸಿದ ಯಕ್ಷಗಾನ ಗುರು ಹಾವಂಜೆ ಮಂಜುನಾಥಯ್ಯ ಮತ್ತವರ ಸದಸ್ಯರ ಪರವಾಗಿ ಇವರ ಮಗ ಡಾ. ಜನಾರ್ದನ ಹಾವಂಜೆ ಪ್ರಶಸ್ತಿಯನ್ನು ಸ್ವೀಕರಿಸಿದರು. ಇವರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## "ಅಪ್ಪ–ಅಮ್ಮ–ಜೋಕುಳ್ಳೊ ಪೊರ್ಲುದೊ ಕೂಟ"



ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಇದರ ಮಹಿಳಾ ವೇದಿಕೆಯಿಂದ "ಅಪ್ಪ – ಅಮ್ಮ – ಜೋಕುಳ್ಳೊ ಪೊರ್ಲುದೊ ಕೂಟ" ಎಂಬ ವಿಶಿಷ್ಟವಾದ ಕಾರ್ಯಕ್ರಮವನ್ನು ತಾ.27.11.2022ರ ಭಾನುವಾರ ಶ್ರೀ ಬಾಲಗಣಪತಿ – ಪ್ರಸನ್ನಪಾರ್ವತಿ ದೇವಳದ ವಠಾರದಲ್ಲಿ ಆಚರಿಸಲಾಯಿತು. ಬೆಳಿಗ್ಗೆ 11 ಗಂಟೆಗೆ ಐವರು ಮಾತೆಯರು ತಮ್ಮ ಪುಟ್ಟ ಕಂದಮ್ಮಗಳೊಂದಿಗೆ ದೀಪ ಬೆಳಗುವುದರ ಮೂಲಕ ಉದ್ಘಾಟನೆಗೊಂಡಿತು. ನಂತರ ಸಂಘದ ಸಂಘಟಕರಾದ ಶ್ರೀ ದಿವಾಕರ್ ರಾವ್ ಇವರು ಚೆಂಡು ಎಸೆಯುವುದರ ಮೂಲಕ ಸ್ಪರ್ಧೆಗಳಿಗೆ ಚಾಲನೆ ನೀಡಿದರು. ಲಘು ಉಪಹಾರದ ನಂತರ ವಯೋಮಾನಕ್ಕನುಗುಣವಾಗಿ ವಿವಿಧ ವಿಭಾಗಗಳಲ್ಲಿ ಚಾಕಲೇಟ್ ಹೆಕ್ಕುವುದು, ನಾಯಿಗೆ ಬಾಲ ಬಿಡಿಸುವುದು, ನಿಂಬೆ – ಚಮಚ ಓಟ, ಸಂಗೀತ ಕುರ್ಚಿ, ಮಡಿಕೆ ಒಡೆಯುವುದು, ಪಿಕ್ & ಆಕ್ಟ್ ಮೊದಲಾದ ಅದೃಷ್ಟದ ಆಟಗಳನ್ನು ಆಡಿಸಲಾಯಿತು.

ಮಧ್ಯಾಹ್ನದ ಭೋಜನದ ಬಳಿಕ ಸಭಾ ಕಾರ್ಯಕ್ರಮವು ನಡೆಯಿತು. ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ್ ರಾವ್, ಪಡುಬಿದ್ರಿ ಅತಿಥಿಗಳಾಗಿ ಮಕ್ಕಳ ಪರವಾಗಿ ಫಲಿಮಾರಿನ ಕು. ಸೃಜನಾ ಶ್ರೀಕಾಂತ್ ರಾವ್, ಸಂಘದ ಮಹಿಳಾ ನಿರ್ದೇಶಕರಾದ ಶ್ರೀಮತಿ ರೇಖಾ

(3ನೇ ಪುಟಕ್ಕೆ...)

**ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 10.00% (ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☏ 2522408) ಪಡುಬಿದ್ರಿ ಶಾಖೆ (☏ 2556608) ಕೋಟೇಶ್ವರ ಶಾಖೆ (☏ 9341854114) ಬ್ರಹ್ಮಾವರ ಶಾಖೆ (☏ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



ತಂತ್ರಾಡಿ ವಿಶ್ವನಾಥ ಶಾನುಭೋಗ್
☏ 94487 24161
97417 85551

**ಹರಿಕೃಷ್ಣ ಡಿಜಿಟಲ್ಸ್**

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



ಡಾ। ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

**Dr. Vijaya Rao Y.B.**
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com

Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

## ಮಹಿಳಾವೇದಿಕೆಯಿಂದ ಒಳಾಂಗಣ ಕ್ರೀಡೆಗಳು

■...1ನೇ ಪುಟದಿಂದ

8 ವಿಭಾಗಗಳಲ್ಲಿ– ಚಾಕಲೇಟ್ ಓಟ, ಕುಂಟಿ ಓಡುವ ಓಟ, ಚಮಚ ಲಿಂಬೆ ಓಟ, ರಟ್ಟು–ಜಟ, ಸೀರೆ ಉಡುವ ಸ್ಪರ್ಧೆ, ಕಾಳು ಹೆಕ್ಕುವ ಸ್ಪರ್ಧೆ, ಬಾಂಬಿಂಗ್ ದ ಸಿಟಿ ಮುಂತಾದ ಸ್ಪರ್ಧೆಗಳು ನಡೆದು ಸಮಾಜ ಬಾಂಧವರು ಸಂತೋಷದಿಂದ ಭಾಗವಹಿಸಿದರು. ಮಧ್ಯಾಹ್ನ ಊಟದ ನಂತರ ನಡೆದ ಸರಳ ಸಮಾರಂಭದಲ್ಲಿ ಶ್ರೀಮತಿ ಜ್ಞಾನೇಶ್ವರಿ ರಾಮಚಂದ್ರ ಕೊಟ್ಟಾರಿಯವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಬಹುಮಾನ ವಿತರಣೆ ನಡೆಸಿ, ಸ್ಪರ್ಧಾ ವಿಜೇತರಿಗೆ ಶುಭಾಶಯಗಳನ್ನು ಕೋರಿದರು. ಭಾಗವಹಿಸಿದ್ದ ಎಲ್ಲಾ ಚಿಣ್ಣರಿಗೂ ಉಡುಗೊರೆ ನೀಡಲಾಯಿತು.

ನಂತರ ಮಧ್ಯಾಹ್ನ 2.00 ಗಂಟೆಗೆ ಎಂ.ಜಿ.ಎಂ. ಕ್ರೀಡಾಂಗಣದಲ್ಲಿ ಮಹಿಳೆಯರ ತ್ರೋ ಬಾಲ್ ಪಂದ್ಯಾವಳಿಯು ವ್ಯವಸ್ಥಿತವಾಗಿ ಜರುಗಿತು. ಡಾ. ಜಯಭಾರತಿಯವರು ರೆಫರಿ ಸ್ಥಾನದಲ್ಲಿದ್ದು ಪಂದ್ಯಗಳನ್ನು ನಡೆಸಿದರು.

**ಭಾಗವಹಿಸಿದ ತಂಡಗಳು :** ಉಡುಪಿ ಎ, ಉಡುಪಿ ಬಿ, ಮಂದಾರ್ತಿ, ಸುಳ್ಯ ಮತ್ತು ಕಾರ್ಕಳ.

ರೋಮಾಂಚಕ ತ್ರೋ ಬಾಲ್ ಪಂದ್ಯಗಳು ನಡೆದು ಅಂತಿಮವಾಗಿ ಉಡುಪಿ 'ಎ' ತಂಡ ವಿನ್ನರ್ ಹಾಗೂ ಮಂದಾರ್ತಿ ತಂಡ ರನ್ನರ್ ಅಪ್ ಆಗಿ ಪದಕಗಳನ್ನು ಗೆದ್ದರು.

## "ಅಪ್ಪ–ಅಮ್ಮ–ಜೋಕುಳ್ಳೊ ಪೊರ್ಲುದೊ ಕೂಟ"

■...2ನೇ ಪುಟದಿಂದ

ಯೋಗೀಶ್ ರಾವ್, ಮುಂಡ್ಕೂರು, ಸಂಘದ ಖಜಾಂಚಿಯಾದ ಶ್ರೀ ಬಿ. ಅರವಿಂದ್ ರಾವ್, ಪಡುಬಿದ್ರಿ, ಸಂಘದ ನಿರ್ದೇಶಕರು ಹಾಗೂ ಕ್ರೀಡಾ ಕಾರ್ಯದರ್ಶಿಯಾಗಿರುವ ಶ್ರೀ ಕೃಷ್ಣರಾಜ ರಾವ್, ಮುದರಂಗಡಿ, ಮಹಿಳಾವೇದಿಕೆಯ ಅಧ್ಯಕ್ಷರಾದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ್ ರಾವ್ ಇನ್ನ ಹಾಗೂ ಸಂಚಾಲಕಿ ಶ್ರೀಮತಿ ಸಾವಿತ್ರಿ ಅರವಿಂದ್ ರಾವ್ ಪಡುಬಿದ್ರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾರ್ಥನೆಯನ್ನು ಎರ್ಮಾಳಿನ ಶ್ರೀಮತಿ ಲಲಿತಾ ಪ್ರಭಾಕರ್ ರಾವ್, ಸೊಸೆ ಶ್ರೀಮತಿ ಆಶಾ ರಾಜೇಶ್ ರಾವ್ ಮತ್ತು ಮೊಮ್ಮಗಳು ಕು.ವೈಷ್ಣವಿ ಮಾಡಿದರು. ಕು. ಮಂಜುಶ್ರೀ ಪಾದೆಬೆಟ್ಟು ಸ್ವಾಗತಿಸಿದರೆ ಮಹಿಳಾವೇದಿಕೆಯ ಅಧ್ಯಕ್ಷರಾದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ್ ರಾವ್ ಪ್ರಸ್ತಾವನೆಗೈದರು. ವೇದಿಕೆಯಲ್ಲಿದ್ದ ಗಣ್ಯರು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಿದರು. ಕು. ಸೃಜನಾ ಮತ್ತು ಅಧ್ಯಕ್ಷರಾದ ಶ್ರೀ ಮೋಹನ್ ರಾವ್ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ತಿಳಿಸಿದರು. ಮುಂಡ್ಕೂರಿನ ಕು. ಸ್ವಾತಿ ಬೆಳ್ಳೆ ಧನ್ಯವಾದವಿತ್ತರು. ಎಲ್ಲಾ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಪಡುಬಿದ್ರಿಯ ಲಲಿತಾಂಬಾ ವೈ. ಶಾಸ್ತ್ರೀ ಮಾಡಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

## ನಿಧನ



ಶ್ರೀಯುತ ದೀಕ್ಷಿತ್‌ರವರ ಧರ್ಮಪತ್ನಿ ಡಾ। ಶ್ರೀಮತಿ ಶ್ವೇತಾ ಡಿ. ರಾವ್‌ರವರು ತಾ.19.11.2022 ನಿಧನರಾದರು. ಅವರು ತಂದೆ ಶ್ರೀ ಶಿವರಾಮ ರಾವ್ ಬೈರಿಕಟ್ಟೆ, ತಾಯಿ, ಪತಿ, ಅಣ್ಣ, ಮಾವ ಶ್ರೀ ಲಕ್ಷ್ಮೀನಾರಾಯಣ ರಾವ್ ಮತ್ತು ಅತ್ತೆ ಹಾಗೂ ಅಪಾರ ಬಂಧು ವರ್ಗದವರನ್ನು ಅಗಲಿರುತ್ತಾರೆ.

★★★★ ★★★★



ಶ್ರೀಮತಿ ಕುಮುದಿನಿ ಎಲ್. ರಾವ್ (ದಿವಂಗತ ಪಿಲಿಂಜೆ ಲಕ್ಷ್ಮೀನಾರಾಯಣ ರಾವ್– ಪಿ.ಎಲ್.ರಾವ್ ಅವರ ಪತ್ನಿ) ತಮ್ಮ 87ನೇ ವಯಸ್ಸಿನಲ್ಲಿ ತಾ.16.11.2022 ರಂದು ಮುಂಬೈನ ಸಿಯಾನ್ನಲ್ಲಿರುವ ಅವರ ನಿವಾಸದಲ್ಲಿ ನಿಧನರಾದರು. ಇವರು ಓರ್ವ ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿರುತ್ತಾರೆ.

★★★★ ★★★★



ನಿವೃತ್ತ ಶಿಕ್ಷಕ ಶ್ರೀ ಕೆ. ರಾಮ ಮೋಹನ್ ರಾವ್ ಅವರು ತಾ.13.11.2022 ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ಶ್ರೀ ಶಂಕರ ರಾವ್ (ಶ್ರೀಮತಿ ಕಲ್ಯಾಣಿ ಬಿ. ರಾವ್ ಮತ್ತು ದಿವಂಗತ ಅದ್ಯಪಾಡಿ ಬಿ.ಎ. ರಾವ್ ಅವರ ಪುತ್ರ) ತಮ್ಮ 65 ನೇ ವಯಸ್ಸಿನಲ್ಲಿ ತಾ.19–11–2022 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರು ಪತ್ನಿ ಹಾಗೂ ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ಶ್ರೀ ಪಡುಬಿದ್ರಿ ಭಾಸ್ಕರ್ ರಾವ್ ಅವರು ತಮ್ಮ 75 ನೇ ವಯಸ್ಸಿನಲ್ಲಿ ತಾ. 22.11.2022 ರಂದು ಪಡುಬಿದ್ರಿಯಲ್ಲಿ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿರುತ್ತಾರೆ.

★★★★ ★★★★



ದಿವಂಗತ ಶ್ರೀ ನಂದಾವರ ಕೌಳಿಗೆ ವರದ ರಾವ್‌ರವರ ಪತ್ನಿ ಶ್ರೀಮತಿ ವತ್ಸಲಾ ರಾವ್ ಅವರು ತಮ್ಮ 73 ನೇ ವಯಸ್ಸಿನಲ್ಲಿ ತಾ.04.12.2022 ರಂದು ನಂದಾವರದ ತಮ್ಮ ಮನೆಯಲ್ಲಿ ನಿಧನರಾದರು. ಇವರು ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ಶ್ರೀ ಈಶ್ವರಮಂಗಲ ಗಣೇಶ್ ರಾವ್ ಅವರು ತಮ್ಮ 73 ನೇ ವಯಸ್ಸಿನಲ್ಲಿ ತಾ. 24.11.2022 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರು ಪತ್ನಿ ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ದಿ. ಕದ್ರಿ ಶೇಷಾದ್ರಿ ರಾವ್ ರವರ ಪತ್ನಿ ಶ್ರೀಮತಿ ಪದ್ಮಾ ಎಸ್. ರಾವ್ ತಮ್ಮ 82ನೇ ವಯಸ್ಸಿನಲ್ಲಿ ತಾರೀಕು 06–12–2022 ರಂದು ತಮ್ಮ ಸ್ವಗ್ರಹ ಕೋಟೇಶ್ವರದಲ್ಲಿ ನಿಧನರಾದರು. ಇವರು ಓರ್ವ ಪುತ್ರ ಛಾಯಾಗ್ರಾಹಕ ರಾಜ್‌ಕುಮಾರ್ ಕೋಟೇಶ್ವರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿರುತ್ತಾರೆ.

★★★★ ★★★★



ದಿ. ಶುಂಠಿಪಾಡಿ ಶಿವರಾವ್‌ರವರ ಪತ್ನಿ ಶ್ರೀಮತಿ ಪ್ರಫುಲ್ಲ ತಮ್ಮ 85ನೇ ವಯಸ್ಸಿನಲ್ಲಿ ತಾರೀಕು 08–12–2022 ರಂದು ಮುಂಬಯಿಯಲ್ಲಿ ನಿಧನರಾದರು. ಇವರು ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

## ಮನದ ಹನಿಗಳು

– ರಶ್ಮಿ ರಾವ್, ಹೊರಮಾವು, ಬೆಂಗಳೂರು

ಕವನಗಳು

ತಲೆಯ ಮೇಲೆ ಧರಿಸಿರುವುದು ಅದೃಶ್ಯವಾಗಿದ್ದರೂ
ಆತ್ಮಾಭಿಮಾನವೆಂಬ ಕಿರೀಟದ ಹೊಳಪು ಎಂದಿಗೂ
ಮುಕ್ಕಾಗದಿರಲಿ.

★★★★ ★★★★

ಪೂರ್ವಾಗ್ರಹ ಪೀಡಿತರಿಗೆ, ಒಳದೃಷ್ಟಿ ತೆರೆಯಲಾಗದೇ ಕಣ್ಣಿದ್ದೂ ಕುರುಡು
ತಾವಾಗಿ ಬದಲಾಗಲು ಬಯಸಬೇಕು. ಬೇರೆಯವರು
ಹೇಳಿದರೆ ವ್ಯರ್ಥ ಶ್ರಮವಷ್ಟೇ!

★★★★ ★★★★

ಹೊಣೆ ಹೊರುವಾಗ ಅರಿವಾಗದು
ಅದರ ಆಳ ಅಗಲ
ಹೊತ್ತ ಮೇಲೆ ಇರುವುದು
ನೈಜ ಸತ್ವ ಪರೀಕ್ಷೆ.

★★★★ ★★★★

ನಮಗೆ ಅರ್ಥವಾಗದ, ಬಿಡಿಸಲಾಗದ ಸಿಕ್ಕು ಸಿಕ್ಕಾದ ಪರಿಸ್ಥಿತಿ ಎದುರಾದಾಗ
ಅನ್ನಿಸುವುದು ಬದುಕೊಂದು ಕ್ಲಿಷ್ಟವಾದ ಒಗಟು
ಸುಳಿವುಗಳ ಬೆನ್ನು ಹಿಡಿದು ವಿಶ್ಲೇಷಣೆಗೈದು
ಒಡೆದು ಬಗೆಹರಿಸುವ ಆ ಮಸುಕು ಹಾದಿಯಾಚೆ ಕಾಣುವುದು ಬೆಳ್ಳಿ ಬೆಳಕು.

★★★★ ★★★★

ನೆನಪುಗಳ ಪೆಟ್ಟಿಗೆ ಏಕಾಂತದಲ್ಲಿ ತೆರೆಯಬೇಕು
ಒಂದಿಷ್ಟು ಸವಿನೆನಪುಗಳ ಮನಸೋಇಚ್ಛೆ ಮೆಲುಕಾಡಿ ಸವಿಯಬೇಕು
ಮತ್ತೊಂದಿಷ್ಟು ಕಂಬನಿಗಳ ಗುರುತಿಗೆ ಮೆಮ್ಮಲ ಮರುಗಬೇಕು
ಮತ್ಯಾರು ಕಾಣದಂತೆ ಅಂತರ್ಯದ ಮೂಲೆಯಲ್ಲಿ
ಬಿಗಿಯಾಗಿ ಮುಚ್ಚಳ ಹಾಕಿ ಆ ಪೆಟ್ಟಿಗೆಯ ಅವಿತಿಡಬೇಕು.

## ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಸರಿಯಾದ ಗೀತೆ ರಚಿಸಿ

1. ದ।ಬಿಂ।ಳೋ।ಗಾ।ದಾ।ಬಂ।ಕ।ಸಿಂ।ದಾ।ಬಂ।ರಿ।ಳೋ।
2. ದ।ಡು।ರ।ಲ್ಲೋ।ಕಿ।ವ।ಹು।ಲ್ಲ।ದೇ।ಇ।ಎ।ದೆ।
3. ನು।ದ।ರೂ।ಲ್ಲಾ।ಮ।ರ।ಸಿಂ।ಟ್ಟೋ।ಯಾ।ಕೆ।ನ।
4. ಕೆ।ಲ್ಲ।ವ।ಇ।ತ।ಂಥ।ತಂ।ತಾ।ದ।ನೇ।ರ್ಯಾ।ಗಿ।ಯೀ।
5. ಗ।ಲ।ಅ।ಯ।ಕು।ಗಾ।ವೋ।ದು।ಆ।ರಂ।ವ।ರಿ।ಲಾ।
6. ವ।ನು।ಡ।ನಾ।ಕ।ವಾ।ಡಿ।ನ್ನ।ಯೇ।ಡಿ।ಡು।ನು।
7. ನಿ।ಮ್ಮೈ।ಯೆ।ಓ।ನಾ।ದು।ಮಾ।ಓ।ನಾ।ಏ।ಮ್ಮೈ।
8. ಮಾ।ಸು।ಶ।ಕ।ಪ।ಡಿ।ವೆಂ।ವ।ತ್ಮ।ರ।ಟೇ।ಶ್ರೀ।ಪ।
9. ನ।ಗಾ।ಡಿ।ವ।ದೆ।ಭಾ।ಈ।ತೆ।ಹಾ।ಗೀ।ನಿ।ಗಿ।
10. ಗ।ರಿ।ರಾ।ಯೋ।ದೆ।ನು।ಗ।ಭ।ರಾ।ಸೇ।ಅ।ಶು।ಗ।



ತಯಾರಿಸಿದವರು :
ಹರೀಶ್ ಹೆಬ್ಬಾರ್ ಹವರಾಲು
9663028751


**ವಾಟ್ಸ್ ಆ್ಯಪ್ ಮೂಲಕ ಉತ್ತರವನ್ನು ನೀಡಿ. ವಾಟ್ಸಾಪ್ ನಂ.9663028751 ಮೊದಲ ಹತ್ತು ಜನರ ಹೆಸರನ್ನು ಮುಂದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.**

**ನವೆಂಬರ್ ತಿಂಗಳ ಜೋಡಿಸಿ ಬರೆಯಿರಿ ಪ್ರಶ್ನೆಗಳಿಗೆ ಉತ್ತರ :**

1. ನೀಲ ಮೇಘ ಶ್ಯಾಮ ನಿತ್ಯಾನಂದ ಧಾಮ 2. ಯಾವ ಕವಿಯು ಬರೆಯಲಾರ 3. ನೆನಪುಗಳ ಮಾತು ಮಧುರ 4. ಕಲ್ಲಿನ ವೀಣೆಯ ಮೀಟಿದರೇನು 5. ಬಾನಲ್ಲಿ ನಿನ್ನಿಂದ ಸೂರ್ಯೋದಯ 6. ಅರಳುವ ಹೂವುಗಳೇ ಆಲಿಸಿರಿ 7. ಕಾವೇರಿಗೆ ಕಾಲುಂಗುರ ತೊಡಿಸಿ 8. ಇದು ನನ್ನ ನಿನ್ನ ಪ್ರೇಮಗೀತೆ ಚಿನ್ನ 9. ಬಾಳುವಂಥ ಹೂವೇ ಬಾಡುವಾಸೆ ಏಕೆ 10. ಮರೆತು ಹೋಯಿತೆ ನನ್ನಯ ಹಾಜರಿ

**ಪ್ರಶ್ನೆಗೆ ವೇಗವಾಗಿ ಉತ್ತರ ನೀಡಿದವರು :**

1. ಎಚ್. ಮಲ್ಲಿಕಾರ್ಜುನ ರಾವ್, ಕಾಪು 2. ಎಸ್.ಪದ್ಮಲತಾ, ಹಿರಿಯಡ್ಕ 3. ನಾಗರಾಜ ರಾವ್, ಕೂಡ್ಲಿ 4. ಮ.ಮ.ಹೆಬ್ಬಾರ್, ಬೆಳಂಜೆ 5. ಶೋಭಾ ರಾವ್, ಹವರಾಲು 6. ನಿರಂಜನ ರಾವ್, ಕೂಡ್ಲಿ 7. ಸುಹಾಸಿನಿ ರಾವ್, ಕಾರ್ಕಳ 8. ಗೀತಾ ರಾವ್, ಇಂದ್ರಾಳಿ 9. ಸುಕನ್ಯಾ ರಾವ್, ಪರ್ಕಳ 10. ವಿದ್ಯಾಅಶೋಕ್ ರಾವ್, ಬೈಲೂರು


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಸಮಾಜಬಾಂಧವರಲ್ಲಿ ಆರ್ಥಿಕ ನೆರವಿಗಾಗಿ ಮನವಿ

ಮಾಳ ಗ್ರಾಮದ ಹಳೆಪ್ಪಳ್ಳೀ ನಿವಾಸಿ ಗ್ರಾಮದ ದೇವಸ್ಥಾನದಲ್ಲಿ ಕೆಲಸ ಮಾಡುವ "ರಮೇಶ್ ರಾವ್" ಇವರ ಹೆಂಡತಿ "ಭಾಗ್ಯಲಕ್ಷ್ಮಿ" ಇವರು "ಬ್ರೈನ್ ಟ್ಯೂಮರ್" ಕಾಯಿಲೆಯಿಂದ ಬಳಲುತ್ತಿದ್ದು ಮಂಗಳೂರು KMC ಆಸ್ಪತ್ರೆಗೆ ದಾಖಲಾಗಿದ್ದಾರೆ ಮತ್ತು ಇದಕ್ಕೆ ತುರ್ತು ಆಪರೇಷನ್ ಆಗಿದ್ದು ಈಗಾಗಲೇ ಸುಮಾರು 5 ಲಕ್ಷದವರೆಗೆ ಖರ್ಚಾಗಿದ್ದು ಅಷ್ಟೊಂದು ಹಣ ಭರಿಸಲು ರಮೇಶ್ ರಾವ್ ಇವರಿಗೆ ಅಸಾಧ್ಯವಾಗಿದ್ದು ಸಹೃದಯಿ ಗ್ರಾಮಸ್ಥರು ದಾನಿಗಳು ತಮಗೆ ಆದಷ್ಟೂ ಸಹಾಯ ಮಾಡಿ ಇವರ ಬಡ ಕುಟುಂಬಕ್ಕೆ ಆದಾರವಾಗಬೇಕಾಗಿ ವಿನಂತಿ....

ಬ್ಯಾಂಕ್ ಖಾತೆ ವಿವರ :**ಹೆಸರು : ರಮೇಶ್ ರಾವ್**

**A/c No. : 520101055819075, IFSC : UBIN0903515**

**ಯೂನಿಯನ್ ಬ್ಯಾಂಕ್ ಮಾಳ Contact ñ 9900787040, 9880205081**

ಈಗಾಗಲೇ ಚೇತರಿಸಿಕೊಳ್ಳುತ್ತಿದ್ದು ಸದ್ಯದಲ್ಲೆ ಡಿಸ್ಚಾರ್ಜ್ ಆಗಲಿದ್ದಾರೆ. ಆಸ್ಪತ್ರೆಯ ಬಿಲ್ ಪಾವತಿಸಲು ಹಣದ ಅವಶ್ಯಕತೆ ಇದ್ದು ಸಹೃದಯಿಗಳು ಸಹಾಯ ಮಾಡಬೇಕಾಗಿ ಪ್ರಾರ್ಥನೆ.

### ಶುಭ ವಿವಾಹ

ಶ್ರೀ ಆಳುಗ್ಗೆಲು ಶ್ರೀಪತಿ ರಾವ್ ಮತ್ತು ದಿವಂಗತ ಶ್ರೀಮತಿ ಪ್ರಭಾವತಿ ಅವರ ಪುತ್ರಿ **ಚಿ.ಸೌ. ಪವಿತ್ರಾ** ಹಾಗೂ ಶ್ರೀ ಕಬ್ಬಿನಾಲೆ ರವೀಂದ್ರ ಹೆಬ್ಬಾರ್ ಮತ್ತು ಶ್ರೀಮತಿ ದೀಪಾ ಅವರ ಪುತ್ರ **ಚಿ. ರಾಕೇಶ್** ಅವರ ವಿವಾಹವು ದಿನಾಂಕ 14.11.2022 ರಂದು ಉಡುಪಿ ಶ್ರೀದೇವಿ ಸಭಾಭವನದಲ್ಲಿ ಜರಗಿತು.

### ಶುಭ ಜನನ

ಶ್ರೀಮತಿ ಶಮಿಕಾ (ಶ್ರೀ ಬಿ.ಶರತ್ ಕುಮಾರ್ ಮತ್ತು ಶ್ರೀಮತಿ ಸರಳಾ ಅವರ ಪುತ್ರಿ) ಮತ್ತು ಶ್ರೀ ಅಚಲ್ ಅವರಿಗೆ ತಾ.02.12.2022 ರಂದು ಹೆಣ್ಣು ಮಗುವಿನ ಜನನ.

★★★★ ★★★★

ಕೊಕ್ರಾಡಿ ಸುರೇಶ ರಾವ್ ಮತ್ತು ಶ್ರೀಮತಿ ನಾಗವಲ್ಲಿಯವರ ಪುತ್ರ ಶ್ರೀ ಆದಿತ್ಯರಾವ್ ಮತ್ತು ಶ್ರೀಮತಿ ಮಧುರಾ ದಂಪತಿಗಳಿಗೆ ತಾ.30.11.2022ರಂದು ಹೆಣ್ಣು ಮಗುವಿನ ಜನನ.

★★★★ ★★★★

ಎರ್ಮಾಳು ಡಾ. ಗುರುಪ್ರಸಾದ್ ಮತ್ತು ಶ್ರೀಮತಿ ಡಾ. ಭಾಗ್ಯಶ್ರೀಯವರಿಗೆ ತಾ.06.12.2022ರಂದು ಹೆಣ್ಣು ಮಗುವಿನ ಜನನ

### ವಿಳಾಸ ಬದಲಾವಣೆ

**ಬಿ.ಜಿ. ರಾವ್**
ದೈವಿಕ, 1703, SMV ಲೇಔಟ್,
5ನೇ ಬ್ಲಾಕ್, ಉಲ್ಲಾಳು ಉಪನಗರ,
ಪೋಸ್ಟ್ ಬೆಂಗಳೂರು 560110

**ಟಿ. ದೇವರಾಜ ಶಾನುಭೋಗ್**
11102, 11ನೇ ಟವರ್, ಪ್ರೆಸ್ಟೀಜ್ ಲೇಕ್ ರಿಡ್ಜ್, ತುರಹಳ್ಳಿ ರಸ್ತೆ, ಸುಬ್ರಹ್ಮಣ್ಯಪುರ,
ಬೆಂಗಳೂರು - 560061

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.10-01-2023 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.23-12-2022** ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

**ತಾ.27-12-2022** ಮತ್ತು **ತಾ.12-01-2023** ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಧನು ಮಾಸದ ವಿಶೇಷ ದಿನಗಳು

| | | | |
|---|---|---|---|
| 16.12.2022 | ಧನು ಸಂಕ್ರಮಣ | 07.01.2023 | ಹೇಮಂತ ಋತು ಪುಷ್ಯ ಮಾಸದ ಕೃಷ್ಣ ಪಕ್ಷಾರಂಭ |
| 19.12.2022 | ಸರ್ವೈಕಾದಶೀ | 09.01.2023 | ಉಡುಪಿ ಸಪ್ತೋತ್ಸವ ಆರಂಭ |
| 23.12.2022 | ಎಳ್ಳಮಾವಾಸ್ಯೆ | 10.01.2023 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.11 |
| 24.12.2022 | ಹೇಮಂತ ಋತು ಪುಷ್ಯ ಮಾಸದ ಶುಕ್ಲ ಪಕ್ಷಾರಂಭ | 14.01.2023 | ಮಕರ ಸಂಕ್ರಮಣ ಉಡುಪಿ 3 ರಥೋತ್ಸವ |
| 28.12.2022 | ಕಿರು ಷಷ್ಠಿ | 15.01.2023 | ಉಡುಪಿ ಚೂರ್ಣೋತ್ಸವ ಉತ್ತರಾಯಣ ಆರಂಭ |
| 01.01.2023 | 2023ನೇ ಹೊಸ ವರ್ಷಾರಂಭ | 18.01.2023 | ಸರ್ವೈಕಾದಶೀ |
| 02.01.2023 | ವೈಕುಂಠ ಏಕಾದಶಿ | | |
| 06.01.2023 | ಹುಣ್ಣಿಮೆ | | |

PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯೆಶಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams


ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೋ


ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

**Buying and selling shares as easy as checking your emails**
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

Ph : 98459 92859
CA
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಶ್ರೀ ಶಾರದಾ ಕ್ರಿಕೆಟ್ ಟ್ರೋಫಿ : ಮತ್ತೆ ನಂದಳಿಕೆ ತಂಡಕ್ಕೆ

■...1ನೇ ಪುಟದಿಂದ

ದಂಪತಿಗಳು ಬಹುಮಾನ ವಿತರಣೆಯಲ್ಲಿ ಜೊತೆಗಿದ್ದರು. ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್ ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ಬಹುಮಾನಿತರ ಪಟ್ಟಿಯನ್ನು ಕೃಷ್ಣಮೂರ್ತಿ ರಾವ್ ಬ್ರಹ್ಮಾವರ ಓದಿದರು. ದೈಹಿಕ ಶಿಕ್ಷಕ ನಿರ್ದೇಶಕಿ ಡಾ। ಜಯಭಾರತಿಯವರು ತ್ರೋಬಾಲ್ ಪಂದ್ಯಾಟಗಳಲ್ಲಿ ವಿಜೇತರಿಗೆ ಟ್ರೋಫಿ ವಿತರಿಸಿ ಅಭಿನಂದಿಸಿದರು. ವೇದಿಕೆಯಲ್ಲಿ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಪ್ರಭಾಕರ ಭಂಡಿ, ಕೋಶಾಧಿಕಾರಿ ಗಣೇಶ ಹೆಬ್ಬಾರ್, ಉಪಾಧ್ಯಕ್ಷರಾದ ಅರವಿಂದ ಕುಮಾರ್, ರಜತ ವೇದಿಕೆಯ ಅಧ್ಯಕ್ಷ ಸಂತೋಷರಾವ್ ಚಿಟ್ಪಾಡಿ, ಮುಖ್ಯ ಅತಿಥಿಗಳಾದ ದೇವಾನಂದ ಭಟ್ ಬೆಳವಾಯಿ, ಕುಡಾಲ್ ವೆಂಕಟರಮಣ, ಶ್ರೀಮತಿ ಡಾ.ಜಯಭಾರತಿ ಉಪಸ್ಥಿತರಿದ್ದರು. ಮಟ್ಟು ಕೃಷ್ಣಕುಮಾರ್ ಕಾರ್ಯಕ್ರಮ ನಿರೂಪಿಸಿ, ಸಂತೋಷ್‌ರಾವ್ ಚಿಟ್ಪಾಡಿ ಧನ್ಯವಾದವಿತ್ತರು.

**ಆಗಮಿಸಿದ್ದ ತಂಡಗಳು :**

1. ಕುಂದಾಪುರ ಸ್ಟ್ರೈಕರ್
2. ಸ್ಥಾನಿಕ ಬ್ರಾಹ್ಮಣ ಪಡುಬಿದ್ರಿ ಎ
3. ಸುಬ್ರಹ್ಮಣ್ಯ ಸದನ ಮಂಗಳೂರು
4. ಎಂಜಾಯ್ ಕ್ರಿಕೆಟರ್ಸ್ ಕುಂದಾಪುರ
5. ರಾವ್ ಬ್ರದರ್ಸ್ ಕಟಪಾಡಿ ಎ
6. ಶ್ರೀ ದುರ್ಗಾ ಕ್ರಿಕೆಟರ್ಸ್ ಮಂದಾರ್ತಿ
7. ಪಂಚಶ್ರೀ ಬಂಟ್ವಾಳ ಎ
8. ಕಬ್ಬಿನಾಲೆ ಹೆಬ್ಬಾರ್ ಕ್ರಿಕೆಟರ್ಸ್ ಎ
9. ಸ್ಥಾನಿಕ ವಾರಿಯರ್ಸ್ ಬೆಳಂಗಡಿ
10. ಷಣ್ಮುಖ ಕ್ರಿಕೆಟರ್ಸ್ ಸುರತ್ಕಲ್
11. ಎಫ್.ಡಬ್ಲ್ಯೂ.ಎಫ್ ಬೆಂಗಳೂರು
12. ರಾವ್ ಬ್ರದರ್ಸ್ ಕಟಪಾಡಿ ಬಿ
13. ಯುನೈಟೆಡ್ ಬ್ರದರ್ಸ್ ಯು.ಎಸ್
14. ಸ್ಥಾನಿಕ ರಾಯಲ್ಸ್ ಬೆಳ್ತಂಗಡಿ
15. ಪಂಚಶ್ರೀ ಬಂಟ್ವಾಳ ಬಿ
16. ಕಬ್ಬಿನಾಲೆ ಹೆಬ್ಬಾರ್ ಕ್ರಿಕೆಟರ್ಸ್ ಬಿ
17. ಸ್ಥಾನಿಕ ಬ್ರಾಹ್ಮಣ ಪಡುಬಿದ್ರಿ ಬಿ
18. ಶಂಕರ ಪ್ರತಿಷ್ಠಾನ ಕಾರ್ಕಳ
19. ಸ್ಥಾನಿಕ ಫ್ರೆಂಡ್ಸ್ ಸುಳ್ಯ
20. ನಂದಳಿಕೆ ತಂಡ

**ನಂದಳಿಕೆ ತಂಡಕ್ಕೆ ಶ್ರೀ ಶಾರದಾ ಟ್ರೋಫಿ :** 33ನೇ ವರ್ಷದ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ ತಾ.04.12.2022 ರಂದು ಎಂ.ಜಿ.ಎಂ. ಮೈದಾನದಲ್ಲಿ ನೆರವೇರಿತು. ಒಟ್ಟು 20 ತಂಡಗಳು ಆಗಮಿಸಿದ್ದು 8.00ಕ್ಕೆ ಮೊದಲ 2 ಪಂದ್ಯಗಳನ್ನು ಪ್ರಾರಂಭಿಸಲಾಯಿತು. ಉದ್ಘಾಟನೆಯ ಬಳಿಕ ವಿರಾಮ ನೀಡದೆ ಪಂದ್ಯಗಳನ್ನು ಟಿ. ವಿಶ್ವನಾಥ ಶ್ಯಾನುಭಾಗ್‌ರವರು ಉತ್ತಮ ಸಮಯ ಪಾಲನೆಯೊಂದಿಗೆ ನಡೆಸಿಕೊಟ್ಟರು. ತಂಡಗಳನ್ನು ನೊಂದಾಯಿಸಲು ಬೇಕಾಗಿರುವ ಗೂಗಲ್ ಶೀಟಿನ ನಿರ್ವಹಣೆ ಹಾಗೂ ಫಿಕ್ಚರನ್ನು ಮುಂಗಡವಾಗಿ ರಚಿಸುವ ಕಾರ್ಯವನ್ನು ವಿನೋದ್ ಕುಮಾರ್ ಹಾಗೂ ಮಧುಚಂದ್ರ ಕೊಟ್ಟಾರಿ ನಿರ್ವಹಿಸಿದ್ದರು. ಊಟದ ಬಳಿಕ ಮೊದಲ ಸೆಮಿಫೈನಲ್ ಪಂದ್ಯಾಟವು ಎಫ್.ಡಬ್ಲ್ಯೂ.ಎಫ್. ಬೆಂಗಳೂರು ಮತ್ತು ನಂದಳಿಕೆ ತಂಡ ಹಾಗೂ 2ನೇ ಸೆಮಿಫೈನಲ್ ಪಂದ್ಯಾಟವು ಸ್ಥಾನಿಕ ವಾರಿಯರ್ಸ್ ಬೆಳಂಗಡಿ ಮತ್ತು ರಾವ್ ಬ್ರದರ್ಸ್ ಕಟಪಾಡಿ ಎ ತಂಡಗಳ ನಡುವೆ ನಡೆಯಿತು. ಸಂಜೆ ನಡೆದ ಫೈನಲ್‌ನಲ್ಲಿ ನಂದಳಿಕೆ ತಂಡವು ರಾವ್ ಬ್ರದರ್ಸ್ ಕಟಪಾಡಿ ಎ ತಂಡವನ್ನು ಸೋಲಿಸಿ ಸತತ 2ನೇ ಬಾರಿಗೆ ಶ್ರೀ ಶಾರದಾ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.


**ನಿರ್ಲಿಪ್ತ ತೀರ್ಪುಗಾರರಾಗಿ :** ಶ್ರೀ ಪ್ರವೀಣ್ ಉಡುಪಿ, ಶ್ರೀ ಶಶಿಕಿರಣ್ ಕಟಪಾಡಿ, ಶ್ರೀ ಕಿರಣ್ ಮಣಿಪಾಲ, ಭರತ್ ಉಡುಪಿ, ಶ್ರೀ ಅಕ್ಷಯ್, ಶ್ರೀ ಯಶವಂತ್, ಶ್ರೀ ಸಂಪತ್, ಶ್ರೀ ವೆಂಕಟ್‌ರವರು ತೀರ್ಪುಗಾರರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿದರು.

**ಸ್ಕೋರರ್ ಆಗಿ :** ಆದರ್ಶರಾವ್ ಉಡುಪಿ, ಸತೀಶ ರಾವ್ ಅಲೆವೂರು, ಪ್ರತೀಕ್ ರಾವ್ ಉಡುಪಿ, ಸುದರ್ಶನ್ ರಾವ್ ಕಾಪು, ಕೋದಂಡರಾಮ ರಾವ್ ಮಂದಾರ್ತಿರವರು ಸ್ಕೋರರ್‌ಗಳಾಗಿ ಸಹಕರಿಸಿದರು.

**ಮಹಿಳೆಯರ ತ್ರೋಬಾಲ್ ಪಂದ್ಯಾಟ :** ಕಳೆದ ಬಾರಿ ಪ್ರಾರಂಭಿಸಿದ ಮಹಿಳೆಯರ ತ್ರೋಬಾಲ್ ಪಂದ್ಯಾಟವು ಈ ಬಾರಿ ಎಂ.ಜಿ.ಎಂ. ಕ್ರೀಡಾಂಗಣದಲ್ಲಿ ಮಧ್ಯಾಹ್ನ ಊಟದ ಬಳಿಕ ಪ್ರಾರಂಭಗೊಂಡಿತು. ಒಟ್ಟು 5 ತಂಡಗಳು ಭಾಗವಹಿಸಿದ್ದ ತ್ರೋಬಾಲ್ ತಂಡದಲ್ಲಿ ಮಹಿಳೆಯರು ಹುಮ್ಮಸ್ಸಿನಿಂದ ಸೇರಿದ್ದರು. ತ್ರೋಬಾಲ್ ಪಂದ್ಯದಲ್ಲಿ ಉಡುಪಿ ಎ ತಂಡ ಪ್ರಥಮ, ಮಂದಾರ್ತಿ ತಂಡ ದ್ವಿತೀಯ ಬಹುಮಾನ ಪಡೆಯಿತು. ಡಾ। ಜಯಭಾರತಿ ತೀರ್ಪುಗಾರರಾಗಿದ್ದರು.

**ಆತಿಥ್ಯ, ಉಟೋಪಚಾರ :** ಬೆಳಗ್ಗಿನ ಉಪಹಾರವು 7.30 ಗಂಟೆಯಿಂದ ಪ್ರಾರಂಭಗೊಂಡಿತು. ಶ್ರೀ ಶಾರದಾ ಮಂಟಪದಲ್ಲಿ ಮಹಿಳೆಯರು ಮತ್ತು ಮಕ್ಕಳು ಉಪಹಾರ ಸೇವಿಸಿ ಸಮಾಜ ಬಾಂಧವರಿಗಾಗಿ ಮತ್ತು ಕ್ರಿಕೆಟ್ ಕ್ರೀಡಾಳುಗಳಿಗೆ ಎಂ.ಜಿ.ಎಂ ಕ್ರೀಡಾಂಗಣದಲ್ಲಿ ಉಪಹಾರದ ವ್ಯವಸ್ಥೆಯಾಗಿತ್ತು. ಬಿಸಿಬಿಸಿ ಸೆಟ್ ದೋಸೆ ಹಾಗೂ ಚಾ, ಕಾಫಿ ಎಲ್ಲರಿಗೂ ನೀಡಲಾಗಿತ್ತು. ಇದಲ್ಲದೆ ಬೆಳಿಗ್ಗೆಯಿಂದಲೇ ಶ್ರೀಮತಿ ಸರಸ್ವತಿ ಮತ್ತು ಶ್ರೀ ವೆಂಕಟ್‌ರಾವ್ ಶ್ಯಾನುಭಾಗ್ ಕೊಕ್ಕರ್ಣೆ ಸ್ಮರಣಾರ್ಥ ಅವರ ಮಕ್ಕಳು, ಮೊಮಕ್ಕಳು ಪ್ರಾಯೋಜಿಸಿದ್ದ ತಂಪು ಪಾನೀಯದ ವ್ಯವಸ್ಥೆಯೂ ಸಾಗಿತ್ತು. ಮಧ್ಯಾಹ್ನ ಊಟಕ್ಕೆ ಚಪಾತಿ ಕುರ್ಮ, ಅನ್ನ ಸಾರ್, ಗುಳ್ಳ ಹುಳಿ, ಪಾಯಸ, ಮಜ್ಜಿಗೆ ನೀಡಲಾಗಿತ್ತು. ಊಟ, ತಿಂಡಿಯ ವ್ಯವಸ್ಥೆಯನ್ನು ಟಿ. ಜಗದೀಶ ರಾವ್, ಚೊಕ್ಕಾಡಿ ದಿವಾಕರ್ ರಾವ್, ಪ್ರಕಾಶ್ ಹೆಬ್ಬಾರ್, ಅಜಿತ್ ರಾವ್ ಮತ್ತು ನಾಗಭೂಷಣ ರಾವ್ ಮೊದಲಾದವರು ವ್ಯವಸ್ಥಿತವಾಗಿ ನಡೆಸಿಕೊಟ್ಟರು. ನಮ್ಮ ಅಚ್ಚುಕಟ್ಟುತನದ ಈ ವ್ಯವಸ್ಥೆ ಹಾಗೂ ಊಟೋಪಚಾರದ ಆತಿಥ್ಯಗಳನ್ನು ಎಲ್ಲರೂ ಮುಕ್ತಕಂಠದಿಂದ ಶ್ಲಾಘಿಸಿದರು.

**ಕೃತಜ್ಞತೆಗಳು :** ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ ಹಾಗೂ ಒಳಾಂಗಣ ಕ್ರೀಡಾಕೂಟಕ್ಕೆ ಆಗಮಿಸಿದ್ದ ಎಲ್ಲಾ ಕ್ರೀಡಾಳುಗಳಿಗೆ, ಸಮಾಜಬಾಂಧವರಿಗೆ, ಬಹುಮಾನಗಳ ಪ್ರಾಯೋಜಕರಿಗೆ, ಆಗಮಿಸಿದ್ದ ಅತಿಥಿ ಗಣ್ಯರಿಗೆ, ಧನ ಸಹಾಯ ನೀಡಿ ಸಹಕರಿಸಿದ ದಾನಿಗಳಿಗೆ, ಬ್ಯಾನರ್ ಒದಗಿಸಿದ ಸಂಘ ಸಂಸ್ಥೆಗಳಿಗೆ, ಪಂದ್ಯಾಟಗಳನ್ನು ವ್ಯವಸ್ಥಿತವಾಗಿ ನಡೆಸಿಕೊಟ್ಟ ನಿರ್ಲಿಪ್ತ ತೀರ್ಪುಗಾರರಿಗೆ, ಆಗಮಿಸಿದ್ದ ನಮ್ಮ ಸಮಾಜದ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ, ಕ್ರೀಡಾ ಕಾರ್ಯಕ್ರಮದ ಯಶಸ್ಸಿಗಾಗಿ ದುಡಿದ ನಮ್ಮ ಸಮಾಜದ ಬಂಧುಗಳಿಗೆ, ಸಂಘದ ಮೆನೇಜರ್ ಹಾಗೂ ಸಹಾಯಕ ಮೆನೇಜರ್ ರವರಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಆಡಳಿತ ಮಂಡಳಿ ಕೃತಜ್ಞತೆಯನ್ನು ಸಲ್ಲಿಸುತ್ತದೆ.



ಚಿತ್ರ ರಚನೆ : **ಕುಮಾರಿ ಶರಣ್ಯ**
**ಕರಂದಾಡಿ ಪದ್ಮನಾಭ ಶ್ಯಾನುಭಾಗ್‌ರವರ ಪುತ್ರಿ**

## "ಚಿತ್ತಾರ" ಚಿತ್ರಕಲಾ ಪ್ರದರ್ಶನ



ಉಡುಪಿಯ ಚಿತ್ರಕಲಾ ಮಂದಿರ ಕಲಾ ವಿದ್ಯಾಲಯ ಇಲ್ಲಿನ ವಿಭೂತಿ ಆರ್ಟ್ ಗ್ಯಾಲರಿಯಲ್ಲಿ, ಬ್ರಹ್ಮಾವರದ ನಿವೃತ್ತ ಚಿತ್ರಕಲಾ ಶಿಕ್ಷಕ ಶ್ರೀ ಕೆ. ದಿನಮಣಿ ಶಾಸ್ತ್ರಿ ಇವರು ರಚಿಸಿದ ಆಕ್ರಲಿಕ್ ಮಾಧ್ಯಮದ ಚಿತ್ರಕೃತಿಗಳ ಚಿತ್ತಾರ ಎನ್ನುವ ನಾಲ್ಕು ದಿನಗಳ ಕಲಾ ಪ್ರದರ್ಶನವನ್ನು ಉಡುಪಿ ಡಯಟ್ ಉಪಪ್ರಾಂಶುಪಾಲರಾದ ಡಾ.ಕೆ. ಅಶೋಕ್ ಕಾಮತ್ ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷರಾಗಿ ವಿದ್ಯಾಲಯದ ನಿರ್ದೇಶಕರಾದ ಡಾ. ಯು. ಸಿ. ನಿರಂಜನ್ ಹಾಗೂ ಅತಿಥಿಗಳಾಗಿ ಉಡುಪಿಯ ಹಿರಿಯ ಕಲಾವಿದರಾದ ಶ್ರೀ ಪಿ. ಎನ್. ಆಚಾರ್ಯ ಉಪಸ್ಥಿತರಿದ್ದರು. ಬಹಳಷ್ಟು ಮಂದಿ ಕಲಾ ಪ್ರೇಮಿಗಳು ಪ್ರದರ್ಶನವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

## ರಜತಾಚರಣೆಗೆ ಮೆರುಗು ನೀಡಿದ ಜೋಡಾಟ



ಛಾಯಾಗ್ರಾಹಕ, ಕಲಾವಿದ, ಸಂಘಟಕ ದೇವಾನಂದ ಭಟ್ಟರ ಕನಸಿನ ಕೂಸು ಬೆಳುವಾಯಿಯ ಶ್ರೀ ಯಕ್ಷದೇವ ಮಿತ್ರ ಕಲಾಮಂಡಳಿ ಇತ್ತೀಚೆಗೆ ತಾನೆ ರಜತ ವರ್ಷವನ್ನು ಅನೇಕ ಕಲಾತ್ಮಕ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ಪೂರೈಸಿತು. ಜುಲೈನಲ್ಲಿ ರಂಗಸ್ಥಳ ತಲೆ ಎತ್ತಿ ನಿಂತಿತ್ತು. ಸುಮಾರು 5000 ಮಂದಿಗೆ ದೋಸೆ ಹಿಟ್ಟು ಕಡೆದು ಸಿದ್ಧವಾಗಿತ್ತು, ತೆಂಕುತಿಟ್ಟಿನ ಸುಮಾರು 150 ಕಲಾವಿದರ ಗಡಣ ಕಾತರದಿಂದ ಕಲಾ ಪ್ರದರ್ಶನಕ್ಕೆ ಕ್ಷಣಗಣನೆ ಮಾಡುತ್ತಿತ್ತು. ಆದರೆ ಎಲ್ಲವನ್ನು ಕರ್ಫ್ಯೂ ಎಂಬ ಭೂತ ತಿಂದು ಹಾಕಿತು. ಪೂರ್ವಯೋಜನೆಯಂತೆ ಜುಲೈ 31ರಂದು ನಡೆಯಬೇಕಾಗಿದ್ದ ಜೋಡಾಟವು ನವೆಂಬರ್ 12ರಂದು ಮತ್ತೊಮ್ಮೆ ಜುಲೈನಲ್ಲಿ ಮಾಡಿದಷ್ಟೇ ತಯಾರಿಯೊಂದಿಗೆ ಮೂಡಬಿದ್ರಿಯ ಆಳ್ವಾಸ್ ಸಭಾಂಗಣದಲ್ಲಿ ಅಷ್ಟೇ ಕಲಾವಿದರ ಸಂಯೋಜನೆಯಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ಜೋಡಾಟ ಮುಗಿದೇ ಹೋಯಿತು. ಎರಡೂ ರಂಗಸ್ಥಳದ ವಿದ್ಯುನ್ಮಾಲಿಗಳು, ಚಂಡ ಮುಂಡರು ಜಿದ್ದಿಗೆ ಬಿದ್ದವರಂತೆ ತಮ್ಮ ಕಲಾ ಪ್ರತಿಭೆಯನ್ನು ಮೆರೆದರು. ಶುಂಭ ವಧೆಯ ಭಾಗವಂತೂ ರೋಚಕವಾಗಿ ಮೂಡಿ ಬಂತು. ದೇವಿ ಮತ್ತು ಶುಂಭರು ದೊಂದಿ ಹಿಡಿದುಕೊಂಡೇ ಹೋರಾಡಿದ ದೃಶ್ಯ ಅಂತಿಮ ಘಟ್ಟಕ್ಕೆ ಮೆರುಗನ್ನು ನೀಡಿತು. ದೈಹಿಕ ಶಕ್ತಿ, ದೀರ್ಘ ಅನುಭವ, ಕೌಶಲ್ಯ, ಪ್ರತಿಭೆಗಳ ಸಮಪಾಕವಾಗಿ ಈ ಪ್ರದರ್ಶನ ಮೂಡಿ ಬಂತು. ಸುಮಾರು 8 ಗಂಟೆಗಳ ಈ ಪ್ರದರ್ಶನ ಕೊನೆಯವರೆಗೂ ಪ್ರೇಕ್ಷಕರನ್ನು ಹಿಡಿದಿಡುವಲ್ಲಿ ಯಶಸ್ವಿ ಯಾಯಿತು.


ಯಕ್ಷಗಾನದ ಪೂರ್ವದಲ್ಲಿ ನಡೆದ ರಜತ ಸಭಾ ಕಾರ್ಯಕ್ರಮದಲ್ಲಿ ಡಾ. ಮೋಹನ್ ಆಳ್ವ, ಶ್ರೀಪತಿ ಭಟ್, ಡಾ. ಪ್ರಭಾಕರ ಜೋಷಿ ಅವರಿಗೆ ಯಕ್ಷದೇವ ರಜತ ಪ್ರಶಸ್ತಿ, ಹಿರಿಯ ಕಲಾವಿದ ಗೋವಿಂದ ಭಟ್ ಅವರಿಗೆ ಯಕ್ಷದೇವ ರಜತ ಪುರಸ್ಕಾರ ಮತ್ತು ಎಮ್. ಕೆ. ರಮೇಶ ಆಚಾರ್ಯ ಅವರಿಗೆ ಗೌರವ ಸನ್ಮಾನಗಳನ್ನು ಮಾಡಲಾಯಿತು. ಕರ್ನಾಟಕ ಸರ್ಕಾರದ ಗೃಹ ಸಚಿವ ಶ್ರೀ ಅರಗ ಜ್ಞಾನೇಂದ್ರ, ಟಿ. ಶ್ಯಾಮ್ ಭಟ್, ಶಾಸಕ ಉಮಾನಾಥ ಕೋಟ್ಯಾನ್ ಮೊದಲಾದವರು ಕಾರ್ಯಕ್ರಮದ ಘನತೆಯನ್ನು ವರ್ಧಿಸಿದರು.

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE), OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

# ಡಾ. ಜನಾರ್ದನ ಹಾವಂಜೆಯವರ "ಮೊಡೆಪು" ಪುಸ್ತಕ ಬಿಡುಗಡೆ



ಆರ್ಟ್ ಕೆನರಾ ಟ್ರಸ್ಟ್, ಇಂಟ್ಯಾಕ್ ಮಂಗಳೂರು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಕಲಾವಿದರಾದ ಡಾ. ಜನಾರ್ದನ ಹಾವಂಜೆಯವರು ಬರೆದಿರುವ ಮಡಿಕೇರಿ, ಕಾಸರಗೋಡು, ಉಡುಪಿ ಹಾಗೂ ಮಂಗಳೂರನ್ನೊಳಗೊಂಡ ಕರಾವಳಿಯ ಭಾಗದ ಗತಿಸಿದ ಚಿತ್ರ ಕಲಾವಿದರ ಬಗೆಗಿನ ಜೀವನ ಮತ್ತು ಬದುಕಿನ ಪುಸ್ತಕ "ಮೊಡೆಪು" ಇತ್ತೀಚೆಗೆ ಮಂಗಳೂರಿನ ಕೊಡಿಯಾಲ್‌ಗುತ್ತು ಆರ್ಟ್ ಸೆಂಟರ್‌ನಲ್ಲಿ ಬಿಡುಗಡೆಗೊಂಡಿತು. ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಸುಬ್ರಹ್ಮಣ್ಯ ಯಡಪಡಿತ್ತಾಯರು ಪುಸ್ತಕವನ್ನು ಬಿಡುಗಡೆ ಮಾಡಿದರಲ್ಲದೇ ಇಂದಿಗೆ ಬಹಳಷ್ಟು ಅಗತ್ಯತೆಯಿರುವ ಈ ತೆರನಾದ ಐತಿಹಾಸಿಕ ದಾಖಲಾತಿಗಳನ್ನು ಸಂಗ್ರಹಿಸಿ ಬರೆದಿರುವುದನ್ನು ಶ್ಲಾಘಿಸಿದರು.

ಈ ಪುಸ್ತಕ ಬಿಡುಗಡೆಯು ಸಮಾರಂಭದ ಜೊತೆಗೆ ಅಗಲಿದ ಆ ಎಲ್ಲ 34 ಕಲಾವಿದರ ಕಲಾಕೃತಿಗಳ ಪ್ರದರ್ಶನವನ್ನೂ ಏರ್ಪಡಿಸಲಾಗಿದ್ದು, ನಂತರ ಉಡುಪಿಯಲ್ಲೂ ಈ ಪ್ರದರ್ಶನವನ್ನು ಹಾವಂಜೆ ಆರ್ಟಿಸ್ಟ್ ಫೋರಂನ ಸಹಯೋಗದಲ್ಲಿ ಆಯೋಜಿಸಿದ್ದರು. ಇವರು ಯಕ್ಷಗುರು ಹಾವಂಜೆ ಮಂಜುನಾಥಯ್ಯ ಮತ್ತು ಬೇಬಿ ಎಂ. ರಾವ್‌ರವರ ಸುಪುತ್ರರಾಗಿದ್ದು ಪ್ರಸ್ತುತ ಮಂಗಳೂರಿನ ವಳಚ್ಚಿಲ್‌ನಲ್ಲಿರುವ ಶ್ರೀನಿವಾಸ ಆರ್ಕಿಟೆಕ್ಚರ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುತ್ತಾರೆ.



ಶ್ರೀಶಾರದಾ ಟ್ರೋಫಿ ವಿನ್ನರ್ಸ್ ನಂದಳಿಕೆ ತಂಡ



ಶ್ರೀಶಾರದಾ ಟ್ರೋಫಿ ರನ್ನರ್ಸ್ ರಾವ್ ಬ್ರದರ್ಸ್ ಕಟಪಾಡಿ ಎ



ಸಮಾರೋಪ ಸಮಾರಂಭದಲ್ಲಿ ಒಂದು ಕ್ಷಣ........



ತ್ರೋಬಾಲ್ ವಿನ್ನರ್ಸ್ ಉಡುಪಿ ಎ ತಂಡ



ತ್ರೋಬಾಲ್ ರನ್ನರ್ಸ್ ಮಂದಾರ್ತಿ ತಂಡ



ಕ್ರೀಡಾಂಗಣದಲ್ಲಿ ಉಪಸ್ಥಿತರು

## ಶ್ರೀಶಾರದಾ ಟ್ರೋಫಿ ಪಂದ್ಯಾಟದಲ್ಲಿ ಭಾಗವಹಿಸಿದ ತಂಡದ ಸದಸ್ಯರ ಅಭಿಪ್ರಾಯ

Firstly, a very big Kudo's and very big thank you to all the committee members who are involved directly or indirectly in yet again very successful & very systematic 33rd Sharada Trophy tournament....!!!! Special thanks to Bhandi, Vinod anna for all the co-ordination & chasing each team.... "Oota-tindi ella arrangements tumba ne chennagittu.... ??"We enjoyed the event completely...."I would like to give one suggestion.... We can avoid paper work for match score updates by using application like Cricinfo and digitalize, transform, upgrade & can go completely online.....!!!! ??

– ಸಿ. ಅವಿನಾಶ್ ರಾವ್, ಎಫ್.ಡಬ್ಲ್ಯೂ.ಎಫ್ ಬೆಂಗಳೂರು

The Arrangement was outstanding . As we all know arranging cricket tournament is how difficult is. Thanks to All committee members. * Rao Brothers Katapady A & B**

–ಮಹೇಶ್ ರಾವ್ ಕಟ್ಪಾಡಿ,
ರಾವ್ ಬ್ರದರ್ಸ್ ಕಟ್ಪಾಡಿ ಎ ತಂಡದ ನಾಯಕ

Very well done by team sharada mantap. Well organised and arrangements are super.

–ಮನಿಶ್ ರಾವ್ ಮಂಗಳೂರು, ಸದನ ತಂಡ.

ಉತ್ತಮವಾದ ಸಂಘಟನೆ. ಕ್ರಿಕೆಟ್ ಮ್ಯಾಚ್ ಬಹಳ ಚೆನ್ನಾಗಿ ಮೂಡಿಬಂದಿದೆ. ಯುವಕರನ್ನು ಒಗ್ಗೂಡಿಸಿ ಅಧ್ಯಕ್ಷರು ನಾವು ಜೊತೆಯಾಗಿ ತಂಡ ಕಟ್ಟಿಕೊಂಡು ಬಂದು ಪಂದ್ಯಾಟದಲ್ಲಿ ಭಾಗವಹಿಸಿದ್ದೇವೆ. ಬಹಳ ಖುಷಿ ಕೊಟ್ಟಿದೆ. ಊಟೋಪಚಾರ ಎಲ್ಲವೂ ಒಳ್ಳೆಯದಾಗಿತ್ತು. ಆಯೋಜಕರಿಗೆ ಪ್ರಣಾಮಗಳು.

– ಸತೀಶ್ ರಾವ್ ಕಾರ್ಕಳ ಸಂಘದ ಕಾರ್ಯದರ್ಶಿ.

ಕ್ರೀಡಾಕೂಟ ಆಯೋಜಕರಿಗೆ ಧನ್ಯವಾದಗಳು. ನಾವು ಎರಡು ತಂಡಗಳನ್ನು ಕಟ್ಟಲು ಬಹಳಷ್ಟು ಶ್ರಮ ಪಟ್ಟಿದ್ದೇವೆ. ಅಂತಹ ಸಂದರ್ಭದಲ್ಲಿ 20 ತಂಡಗಳನ್ನು ಒಂದೇ ಕಡೆ ಸೇರಿಸಿ ಯಶಸ್ವಿಯಾಗಿ ಕ್ರೀಡಾಕೂಟವನ್ನು ಆಯೋಜಿಸಿ ಒಂದು ಮಹತ್ತರವಾದ ಸಾಧನೆಯನ್ನು ಮಾಡಿದ್ದೀರಿ. ಯುವಕರನ್ನು ಒಟ್ಟುಗೂಡಿಸಿ ಒಗ್ಗಟ್ಟನ್ನು ಪ್ರದರ್ಶಿಸಲು ಸಹಕರಿಸಿದ್ದೀರಿ. ಅಚ್ಚುಕಟ್ಟಾಗಿ ಆಯೋಜನೆ ರುಚಿಕರವಾದ ಭೋಜನ ಮತ್ತು ನಿಮ್ಮ ನಗುಮೊಗದ ಆತಿಥ್ಯ ನಮಗೆ ಅಗಾಧವಾದ ಸಂತಸವನ್ನು ನೀಡಿದೆ, ಮುಂದೆಯೂ ಸಹ ಇದೇ ರೀತಿ ಆಯೋಜಿಸಲು ಇನ್ನಷ್ಟು ಶಕ್ತಿಯನ್ನು ನೀಡಲಿ ಎಂಬುವುದು ನಮ್ಮ ಪ್ರಾರ್ಥನೆ.

–ನಿತಿನ್ ಬಂಟ್ವಾಳ, ಪಂಚಶ್ರೀ ಬಂಟ್ವಾಳ ತಂಡದ ಸಂಘಟಕರು

With Best Compliments From :




Printed & Published by : Sri P. Prabhakara Bhandi onbehalf of Sri Sthanika Brahmana Sangha (R.), Printed at SriNidhi Graphic Tech, D.No.8-7A1-12, Ground Floor, Shambhavi Crytal Biz Hub, Near D.C. Office, Manipal-576104, Karnataka. Published at Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar, Udupi.
Ph : 0820-2958444, E-mail : srisharadaudupi@gmail.com Website : www.srisharada.org